Akashvani : Bangalore
National Bulletin In Kannada
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

04.04.2025 19.35 hrs

**<><*<><>*><>**

## ಮುಖ್ಯಾಂಶಗಳು

- ಸಂಸತ್ತಿನ ಎರಡೂ ಸದನಗಳು ಅನಿರ್ದಿಷ್ಟಾವಧಿಗೆ ಮುಂದೂಡಿಕೆ; ಲೋಕಸಭೆಯಲ್ಲಿ ೧೬, ರಾಜ್ಯಸಭೆಯಲ್ಲಿ ೧೪ ವಿಧೇಯಕ ಅಂಗೀಕಾರ
- ವಿಪತ್ತು ನಿರ್ವಹಣೆ, ಸುಸ್ಥಿರ ಸಮುದ್ರ ಸಾರಿಗೆ, ಕೃಷಿ ಸಂಶೋಧನೆಗೆ ಭಾರತದಲ್ಲಿ ಬಿಮ್‌ಸ್ಟೆಕ್ ಶ್ರೇಷ್ಠತಾ ಕೇಂದ್ರಗಳ ಸ್ಥಾಪನೆ-ಪ್ರಧಾನಿ ನರೇಂದ್ರ ಮೋದಿ
- ಹದಿನೆಂಟು ಸಾವಿರದ ೬೫೮ ಕೋಟಿ ರೂಪಾಯಿಗಳ ನಾಲ್ಕು ರೈಲ್ವೆ ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ
- ಐಪಿಎಲ್ ಟಿ-೨೦ ಕ್ರಿಕೆಟ್; ಲಕ್ನೋ ಸೂಪರ್ ಜೈಂಟ್ಸ್- ಮುಂಬೈ ಇಂಡಿಯನ್ಸ್ ತಂಡಗಳ ಸೆಣಸಾಟ

**<><*<><>*><>**

ಸಂಸತ್ತಿನ ಎರಡೂ ಸದನಗಳನ್ನು ಇಂದು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು. ಇದರೊಂದಿಗೆ, ಈ ವರ್ಷದ ಜನವರಿ ೩೧ ರಂದು ಪ್ರಾರಂಭವಾದ ಸಂಸತ್ತಿನ ಬಜೆಟ್ ಅಧಿವೇಶನವು ಅಂತ್ಯಗೊಂಡಿದೆ. ಲೋಕಸಭೆಯಲ್ಲಿ ತಮ್ಮ ಸಮಾರೋಪ ಭಾಷಣದಲ್ಲಿ ಲೋಕಸಭಾಧ್ಯಕ್ಷ ಓಂ ಬಿರ್ಲಾ, ಬಜೆಟ್ ಅಧಿವೇಶನದಲ್ಲಿ ಸದನವು ಶೇಕಡಾ ೧೧೮ ರಷ್ಟು ಉತ್ಪಾದಕತೆಯನ್ನು ದಾಖಲಿಸಿದೆ. ಅಧಿವೇಶನದಲ್ಲಿ ೧೬ ವಿಧೇಯಕಗಳನ್ನು ಅಂಗೀಕರಿಸಲಾಗಿದೆ ಎಂದು ತಿಳಿಸಿದರು. ಇದಕ್ಕೂ ಮುನ್ನ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮಾತನಾಡಿ, ರಾಜ್ಯಸಭೆಯು ವಕ್ಫ್ ತಿದ್ದುಪಡಿ ವಿಧೇಯಕ-೨೦೨೫ ರ ಮೇಲೆ ೧೭ ಗಂಟೆಗಳಿಗೂ ಹೆಚ್ಚು ಚರ್ಚೆ ನಡೆಸಿದೆ. ಇದು ಇತಿಹಾಸದಲ್ಲಿಯೇ ಅತಿ ಸುದೀರ್ಘವಾದದು. ಈ ವಿಧೇಯಕದ ಕುರಿತು ಲೋಕಸಭೆಯಲ್ಲಿ ಸುಮಾರು ೧೪ ಗಂಟೆಗಳ ಚರ್ಚೆ ನಡೆಸಲಾಗಿದೆ ಎಂದು ಹೇಳಿದರು. ಲೋಕಸಭೆಯಲ್ಲಿ ಬೆಳಗ್ಗೆ ಸದನ ಸೇರಿದಾಗ, ಭಾರತದ ಮೇಲೆ ಅಮೆರಿಕ ವಿಧಿಸಿರುವ ಪ್ರತಿಸುಂಕದ ಕುರಿತು ವಿರೋಧ ಪಕ್ಷಗಳು ಗದ್ದಲ ಸೃಷ್ಟಿಸಿದರು. ಕಾಂಗ್ರೆಸ್, ಡಿಎಂಕೆ ಮತ್ತು ಇತರೆ ವಿರೋಧ ಪಕ್ಷಗಳ ಸದಸ್ಯರು ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು. ಕೆಲವು ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟಿಸಿದರು. ನಂತರ ಕಲಾಪವನ್ನು ಮಧ್ಯಾಹ್ನದವರೆಗೆ ಮುಂದೂಡಲಾಯಿತು. ಮತ್ತೊಂದೆಡೆ, ವಕ್ಫ್ ತಿದ್ದುಪಡಿ ವಿಧೇಯಕವು ಸಂವಿಧಾನದ ಮೇಲಿನ ದಾಳಿ ಎಂಬ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಯವರ ಹೇಳಿಕೆಗೆ ಆಡಳಿತ ಪಕ್ಷದ ಸದಸ್ಯರು ಆಕ್ಷೇಪ ಎತ್ತಿದ್ದರು. ಕೂಡಲೇ ಸೋನಿಯಾ ಗಾಂಧಿಯವರು ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿದರು. ಗದ್ದಲದ ನಡುವೆ, ಸ್ಪೀಕರ್ ಓಂ ಬಿರ್ಲಾ ಪ್ರಶ್ನೋತ್ತರ ಅವಧಿಯನ್ನು ಕೈಗೆತ್ತಿಕೊಳ್ಳಲು ಪ್ರಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ. ನಂತರ, ಅವರು ಸದನವನ್ನು ಮಧ್ಯಾಹ್ನದವರೆಗೆ ಮುಂದೂಡಿದರು. ರಾಜ್ಯಸಭೆಯಲ್ಲಿ ಮಧ್ಯಾಹ್ನ ೧ ಗಂಟೆಗೆ ಎರಡನೇ ಮುಂದೂಡಿಕೆಯ ನಂತರ ಸದನ ಮತ್ತೆ ಸೇರಿದಾಗ, ಸಭಾಪತಿ ಜಗದೀಪ್ ಧನ್‌ಕರ್ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು. ತಮ್ಮ ಸಮಾರೋಪ ಭಾಷಣದಲ್ಲಿ ಅವರು, ಸದನವು ಶೇಕಡಾ ೧೧೯ ರಷ್ಟು ಉತ್ಪಾದಕತೆಯನ್ನು

ದಾಖಲಿಸಿದೆ. ವಕ್ಫ್ ತಿದ್ದುಪಡಿ ವಿಧೇಯಕದ ವಿಷಯವಾಗಿ ಅಭೂತಪೂರ್ವ ಚರ್ಚೆ ನಡೆಸಿತು. ಇದು ಸದನದ ಇತಿಹಾಸದಲ್ಲಿಯೇ ಸುದೀರ್ಘವಾದದು ಎಂದು ಹೇಳಿದರು.

<><*<><>*><>

ಇಂದು ಮುಕ್ತಾಯಗೊಂಡ ಬಜೆಟ್ ಅಧಿವೇಶನವು ಅತ್ಯಂತ ಫಲಪ್ರದವಾಗಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ. ಈ ಕುರಿತು ನವದೆಹಲಿಯಲ್ಲಿಂದು ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ವಕ್ಫ್ ತಿದ್ದುಪಡಿ ವಿಧೇಯಕದ ಮೇಲಿನ ಚರ್ಚೆಯ ಸಮಯದಲ್ಲಿ ಒಂದೇ ಒಂದು ಅಡಚಣೆಯೂ ಉಂಟಾಗಿಲ್ಲ ಮತ್ತು ಸಂಸತ್ತಿನ ಇತಿಹಾಸದಲ್ಲಿ ಇಷ್ಟೊಂದು ಸುದೀರ್ಘ ಚರ್ಚೆ ಎಂದೂ ನಡೆದಿಲ್ಲ ಎಂದರು. ಅಧಿವೇಶನದಲ್ಲಿ ಲೋಕಸಭೆಯು ೧೬ ವಿಧೇಯಕಗಳನ್ನು ಮತ್ತು ರಾಜ್ಯಸಭೆಯು ೧೪ ವಿಧೇಯಕಗಳನ್ನು ಅಂಗೀಕರಿಸಿದೆ ಎಂದು ಸಚಿವ ಕಿರಣ್ ರಿಜಿಜು ತಿಳಿಸಿದರು.

<><*<><>*><>

ಸಾಮರ್ಥ್ಯ ವೃದ್ಧಿಗೆ ಭಾರತ ನೇತೃತ್ವದ ಹಲವಾರು ಉಪಕ್ರಮಗಳನ್ನು ಬಿಮ್‌ಸ್ಟೆಕ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು. ಬ್ಯಾಂಕಾಕ್‌ನಲ್ಲಿ ನಡೆದ ೬ನೇ ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಭಾಗವಹಿಸಿದ ಅವರು, ವಿಪತ್ತು ನಿರ್ವಹಣೆ, ಸುಸ್ಥಿರ ಸಮುದ್ರ ಸಾರಿಗೆ, ಸಾಂಪ್ರದಾಯಿಕ ಔಷಧ ಮತ್ತು ಕೃಷಿಯಲ್ಲಿ ಸಂಶೋಧನೆ ಮತ್ತು ತರಬೇತಿ ಕುರಿತು ಭಾರತದಲ್ಲಿ ಬಿಮ್‌ಸ್ಟೆಕ್ ಶ್ರೇಷ್ಠತಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ತಿಳಿಸಿದರು. ಯುವಕರನ್ನು ಕೌಶಲ್ಯಗೊಳಿಸಲು ಹೊಸ ಕಾರ್ಯಕ್ರಮವನ್ನು ಸಹ ಅವರು ಘೋಷಿಸಿದರು. 'ಬೋಧಿ - ಮಾನವ ಸಂಪನ್ಮೂಲ ಮೂಲಸೌಕರ್ಯದ ಸಂಘಟಿತ ಅಭಿವೃದ್ಧಿಗಾಗಿ ಬಿಮ್‌ಸ್ಟೆಕ್' ಇದರ ಅಡಿಯಲ್ಲಿ ವೃತ್ತಿಪರರು, ವಿದ್ಯಾರ್ಥಿಗಳು, ಸಂಶೋಧಕರು, ರಾಜತಾಂತ್ರಿಕರು ಮತ್ತು ಇತರರಿಗೆ ತರಬೇತಿ ಮತ್ತು ವಿದ್ಯಾರ್ಥಿವೇತನಗಳನ್ನು ನೀಡಲಾಗುವುದು ಎಂದರು. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದಲ್ಲಿ ಪ್ರಾದೇಶಿಕ ಅಗತ್ಯಗಳನ್ನು ನಿರ್ಣಯಿಸಲು ಭಾರತದಿಂದ ಪ್ರಾಯೋಗಿಕ ಅಧ್ಯಯನ ಮತ್ತು ಈ ಪ್ರದೇಶದಲ್ಲಿ ಕ್ಯಾನ್ಸರ್ ಆರೈಕೆಗಾಗಿ ಸಾಮರ್ಥ್ಯ ವೃದ್ಧಿ ಕಾರ್ಯಕ್ರಮ ಆರಂಭಿಸಲಾಗುವುದು ಎಂದು ಪ್ರಧಾನಿ ಮೋದಿ ಘೋಷಿಸಿದರು. ಬಿಮ್‌ಸ್ಟೆಕ್ ವಾಣಿಜ್ಯ ಮಂಡಳಿಯನ್ನು ಸ್ಥಾಪಿಸಲು ಮತ್ತು ಭಾರತದಲ್ಲಿ ಪ್ರತಿ ವರ್ಷ ಬಿಮ್‌ಸ್ಟೆಕ್ ವ್ಯವಹಾರ ಶೃಂಗಸಭೆಯನ್ನು ಆಯೋಜಿಸುವಂತೆ ಅವರು ಕರೆ ನೀಡಿದರು. ಬಿಮ್‌ಸ್ಟೆಕ್ ಸಾಗರ ಸಾರಿಗೆ ಒಪ್ಪಂದಕ್ಕೆ ಸಹಿ ಹಾಕುವುದು, ಬಿಮ್‌ಸ್ಟೆಕ್ ಬ್ಯಾಂಕಾಕ್ ವಿಷನ್ ೨೦೩೦ ಅನ್ನು ಅಳವಡಿಸಿಕೊಳ್ಳುವುದು ಮತ್ತು ಬಿಮ್‌ಸ್ಟೆಕ್ ಶ್ರೇಷ್ಠ ವ್ಯಕ್ತಿಗಳ ಗುಂಪಿನ ವರದಿಯನ್ನು ಅಳವಡಿಸಿಕೊಳ್ಳುವುದನ್ನು ಪ್ರಧಾನಿ ಮೋದಿ ಸ್ವಾಗತಿಸಿದರು.

<><*<><>*><>

ಪ್ರಜಾಪ್ರಭುತ್ವ, ಸ್ಥಿರ, ಶಾಂತಿಯುತ, ಪ್ರಗತಿಪರ ಮತ್ತು ಎಲ್ಲರನ್ನೂ ಒಳಗೊಂಡ ಬಾಂಗ್ಲಾದೇಶಕ್ಕೆ ಭಾರತ ಬೆಂಬಲ ನೀಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪುನರುಚ್ಚರಿಸಿದರು. ಬಿಮ್‌ಸ್ಟೆಕ್ ಶೃಂಗಸಭೆಯ ನೇಪಥ್ಯದಲ್ಲಿ ಇಂದು ಬಾಂಗ್ಲಾದೇಶದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನಸ್ ಅವರೊಂದಿಗಿನ ಸಭೆಯಲ್ಲಿ, ಭಾರತವು ಸಂಬಂಧಕ್ಕೆ ಜನ ಕೇಂದ್ರಿತ ವಿಧಾನವನ್ನು ನಂಬುತ್ತದೆ ಎಂದು ಪ್ರಧಾನಿ ಮೋದಿ ಒತ್ತಿ ಹೇಳಿದರು. ಬ್ಯಾಂಕಾಕ್‌ನಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡಿದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ದೀರ್ಘಾವಧಿಯವರೆಗೆ ಭಾರತ ಮತ್ತು ಬಾಂಗ್ಲಾದೇಶ ನಡುವಿನ ಸಹಕಾರವು ಎರಡೂ ದೇಶಗಳ ಜನರಿಗೆ ಸ್ಪಷ್ಟ ಪ್ರಯೋಜನಗಳನ್ನು ನೀಡಿದೆ. ಪ್ರಾಯೋಗಿಕತೆಯ

ಮನೋಭಾವದ ಆಧಾರದ ಮೇಲೆ ಬಾಂಗ್ಲಾದೇಶದೊಂದಿಗೆ ಸಕಾರಾತ್ಮಕ ಮತ್ತು ರಚನಾತ್ಮಕ ಸಂಬಂಧವನ್ನು ರೂಪಿಸುವ ಭಾರತದ ಬಯಕೆಯನ್ನು ಪ್ರಧಾನಿ ಮೋದಿ ಒತ್ತಿ ಹೇಳಿದರು.

ಧ್ವನಿ: ವಿಕ್ರಮ್ ಮಿಸ್ರಿ ( ೨೬ ಸೆಕೆಂಡ್ಸ್)

<><*<><>*><>

ಕೇಂದ್ರ ಸಚಿವ ಸಂಪುಟ ಇಂದು ನಾಲ್ಕು ರೈಲ್ವೆ ಯೋಜನೆಗಳಿಗೆ ಅನುಮೋದನೆ ನೀಡಿದೆ. ಈ ಕುರಿತು ನವದೆಹಲಿಯಲ್ಲಿಂದು ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ೧೮ ಸಾವಿರದ ೬೫೮ ಕೋಟಿ ರೂಪಾಯಿಗಳ ಈ ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ತಿಳಿಸಿದರು. ಈ ಯೋಜನೆಯು ಮಹಾರಾಷ್ಟ್ರ, ಒಡಿಶಾ ಮತ್ತು ಛತ್ತೀಸ್‌ಗಢ ರಾಜ್ಯಗಳ ೧೫ ಜಿಲ್ಲೆಗಳಲ್ಲಿ ಅನುಷ್ಠಾನಗೊಳ್ಳಲಿದೆ. ಹಾಲಿ ಇರುವ ರೈಲ್ವೆ ಜಾಲದೊಂದಿಗೆ ಹೆಚ್ಚುವರಿಯಾಗಿ ೧ ಸಾವಿರದ ೨೪೭ ಕಿಲೋಮೀಟರ್ ಜಾಲ ವಿಸ್ತರಣೆಯಾಗಲಿದೆ ಎಂದು ಅವರು ಹೇಳಿದರು. ಈ ಯೋಜನೆಯಿಂದ ೩೭೯ ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿಯಾಗಲಿದೆ, ಸರಕು ಸಾಗಾಟ ವೆಚ್ಚ ತಗ್ಗಲಿದೆ, ಉತ್ತಮ ಪ್ರಯಾಣಕ್ಕಾಗಿ ಅನುಕೂಲವಾಗಲಿದೆ. ಅಲ್ಲದೆ, ಇಂಗಾಲ ಹೊರಸೂಸುವಿಕೆಯನ್ನು ತಗ್ಗಿಸಲು ಈ ಯೋಜನೆ ಸಹಕಾರಿಯಾಗಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದರು.

ಧ್ವನಿ: ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ( ೨೯ ಸೆಕೆಂಡ್ಸ್ )

<><*<><>*><>

ಬೇಟಿ ಬಚಾವೊ ಬೇಟಿ ಪಡಾವೊ ಯೋಜನೆಯಿಂದ ರಾಷ್ಟ್ರೀಯ ಮಟ್ಟದಲ್ಲಿ ೨೦೧೪-೧೫ ನೇ ಸಾಲಿನಲ್ಲಿ ೯೧೮ ರಷ್ಟಿದ್ದ ಲಿಂಗಾನುಪಾತ ೨೦೨೩-೨೪ ರಲ್ಲಿ ೯೩೦ ಕ್ಕೆ ಏರಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಲೋಕಾಸಭೆಯಲ್ಲಿಂದು ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣಾ ದೇವಿ, ಲಿಂಗಾನುಪಾತ ಹಾಗೂ ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಸಬಲೀಕರಣ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲು ೨೦೧೫ ರಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಯಿತು ಎಂದರು. ಮಾಧ್ಯಮಿಕ ಹಂತದಲ್ಲಿ ಶಾಲೆಗಳಲ್ಲಿ ಒಟ್ಟು ದಾಖಲಾತಿ ಅನುಪಾತವು ೨೦೧೪-೧೫ ರಲ್ಲಿ ಶೇಕಡಾ ೭೫ ರಿಂದ ೨೦೨೩-೨೪ ರಲ್ಲಿ ಶೇಕಡಾ ೭೮ಕ್ಕೆ ಏರಿಕೆಯಾಗಿದೆ ಎಂದು ಸಚಿವರು ಹೇಳಿದರು.

<><*<><>*><>

ಉತ್ತರ ಪ್ರದೇಶದ ಲಕ್ನೋದ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ಲಕ್ನೋ ಸೂಪರ್ ಜೈಂಟ್ಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

<><*<><>*><>

೨೦೨೩ ರಲ್ಲಿ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಗಮನಾರ್ಹ ಖಾಸಗಿ ಹೂಡಿಕೆಗಳೊಂದಿಗೆ ಭಾರತ ಜಾಗತಿಕವಾಗಿ ೧೦ ನೇ ಸ್ಥಾನದಲ್ಲಿದೆ. ಯುಎನ್ ವ್ಯಾಪಾರ ಮತ್ತು ಅಭಿವೃದ್ಧಿ ಯುಎನ್‌ಸಿಟಿಎಡಿ ಬಿಡುಗಡೆ ಮಾಡಿದ ೨೦೨೫ ರ ತಂತ್ರಜ್ಞಾನ ಮತ್ತು ನಾವೀನ್ಯತೆ ವರದಿಯ ಪ್ರಕಾರ, ಫ್ರಾಂಟಿಯರ್

ಟೆಕ್ನಾಲಜೀಸ್ ಸೂಚ್ಯಂಕಕ್ಕಾಗಿ ಸಿದ್ಧತೆಯಲ್ಲಿ ೨೦೨೪ ರಲ್ಲಿ ೧೭೦ ರಾಷ್ಟ್ರಗಳಲ್ಲಿ ಭಾರತ ೩೬ ನೇ ಸ್ಥಾನದಲ್ಲಿದೆ, ೨೦೨೩ ರಲ್ಲಿ ಭಾರತ ೪೮ ನೇ ಸ್ಥಾನದಲ್ಲಿತ್ತು.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**